

# ಇಳಿಜಾರು ಗುಡ್ಡವನ್ನು ನಂದನವಾಗಿಸಿದ ಅಮೈ ಮಹಾಲಿಂಗ ನಾಯ್ಕ



ಚಿಕ್ಕ ಚೊಕ್ಕ ಮನೆಯೀಗ ರಾಷ್ಟ್ರೀಯ ಸುದ್ದಿ



ಮಣ್ಣು ಅಗೆಯುವುದು, ಅಗೆದ ಮಣ್ಣನ್ನು ಪೇರಿಸಿ ತಟ್ಟುಗೊಳಿಸುವ ಕೆಲಸ ಒಬ್ಬರದೇ. ಮಣ್ಣಿನ ಸವಕಳಿ ತಡೆಯಲು ಅಲ್ಲಲ್ಲಿ 'ಕಟ್ಟಪುಣಿ'ಗಳ (ತಡೆಗಟ್ಟ) ರಚನೆ. ಕೂಲಿ ಕೆಲಸಕ್ಕಾಗಿ ಕೆಳಭಾಗದಲ್ಲಿರುವ ತೋಟಗಳಿಗೆ ದಿನಕ್ಕೊಮ್ಮೆ ಇಳಿಯಲೇಬೇಕಾಗಿತ್ತು. ಕೆಲಸ ಮುಗಿಸಿ ಹಿಂದಿರುಗುವಾಗ ತಪ್ಪಲಿನಲ್ಲಿದ್ದ ಕಲ್ಲುಗಳನ್ನು ಹೊತ್ತು ಮೇಲೇರುತ್ತಿದ್ದರು. ದಿನಕ್ಕೆರಡರಂತೆ ಕಲ್ಲುಗಳು ಗುಡ್ಡ ಸೇರುತ್ತಿದ್ದುವು. ಐವತ್ತೋ ಅರುವತ್ತೋ ಕಲ್ಲುಗಳನ್ನು ಪೇರಿಸಿ ತಡೆಗಟ್ಟವನ್ನು ಕಟ್ಟುತ್ತಿದ್ದರು. ಮತ್ತೆ ಪುನಃ ಕಲ್ಲು ಸಾಗಾಟ. ಭವಿಷ್ಯವನ್ನು ಕಟ್ಟಿಕೊಳ್ಳುವ ನಾಯ್ಕರ ಕನಸಿನ ಮುಂದೆ ಕಲ್ಲುಗಳ ಭಾರ ಹಗುರವಾಗಿತ್ತು!

ನಾಯ್ಕರ ತಪೋಭೂಮಿಯಲ್ಲೀಗ ಏಳು ತಟ್ಟುಗಳಲ್ಲಿ 'ಕಟ್ಟಪುಣಿ'ಗಳಿವೆ. ಏನಿಲ್ಲವೆಂದರೂ ಒಟ್ಟು ಇನ್ನೂರೈವತ್ತು ಮೀಟರ್ ಉದ್ದ, ಎರಡು ಮೀಟರ್ ಅಗಲದಂತೆ ಲೆಕ್ಕ ಹಿಡಿದರೂ ಎರಡು ಲಕ್ಷ ರೂಪಾಯಿಗೂ ಮಿಕ್ಕಿದ ಮಾನವಶ್ರಮ! ಇದರಿಂದ ಮಣ್ಣು ಸವಕಳಿಯಿಲ್ಲ. ಗುಡ್ಡಕ್ಕೆ ಸಲೀಸಾಗಿ ಏರಲು ಹಾದಿಯೂ ಜತೆಜತೆಗೆ ನಿರ್ಮಾಣವಾಯಿತು.

## ಸುರಂಗದೊಳಗೆ ಚಿಮ್ಮಿದ ಗಂಗೆ

ಗುಡ್ಡದಲ್ಲಿ ನೀರು ಮರೀಚಿಕೆ. ಬಾವಿ ತೋಡಿದರೆ ನೀರು ಸಿಗಬಹುದೆನ್ನುವ ವಿಶ್ವಾಸವಿದ್ದಿರಲಿಲ್ಲ. ಅರ್ಧ ಮೈಲು ದೂರದಿಂದ ಬಿಂದಿಗೆಯಲ್ಲಿ ನೀರು ತರುತ್ತಿದ್ದರು. ಇದ್ದ ಜಾಗದಲ್ಲಿ ಕೃಷಿ ಶುರು ಮಾಡಿದ್ದರು. ಅದಕ್ಕೆ ಉಣಿಸಲು ಕೂಡಾ ಇದೇ ನೀರು. 'ಈ ಬವಣೆಗೆ ಕೊನೆ ಎಂತು' ಎಂದು ಯೋಚಿಸುತ್ತಿರುವಾಗ ಅವರಿಗೆ ಹೊಳೆದುದು ಸುರಂಗದ ಕೊರೆತ! ಯೋಚನೆ ಯೋಜನೆಗೊಂಡು ಅನುಷ್ಠಾನಕ್ಕಿಳಿದರು.

ಸುರಂಗವೆಂದರೆ ನೆಲದಾಳದ ಹೊಂಡವಲ್ಲ. ಗುಡ್ಡದ ಅಡ್ಡಕ್ಕೆ ಕೊರೆದು ಮಾಡುವ ರಚನೆ. ಆರೂವರೆ ಅಡಿ ಎತ್ತರ, ಮೂರಡಿ ಅಗಲ – ಮನುಷ್ಯ ಚಲಿಸುವಷ್ಟು – ಗುಡ್ಡವನ್ನು ಅಡ್ಡಕ್ಕೆ ಕೊರೆಯುವುದು. ಕೃಷಿಯಲ್ಲಿ ಬಳಸುವ ಪಿಕ್ಕಾಸಿಯಲ್ಲಿ ಅಗೆತ. ಚಿಕ್ಕ ಹಾರೆಯಲ್ಲಿ ಅಗೆದ ಮಣ್ಣನ್ನು ಬುಟ್ಟಿಯಲ್ಲಿ ಹಾಕಿ ಸ್ವಲ್ಪ ಸ್ವಲ್ಪವೇ ಹೊರ ಸಾಗಾಟ.

ಕೊರೆಯುತ್ತಾ ಮುಂದೆ ಹೋದಷ್ಟೂ ಬೆಳಕಿನ ಅಭಾವ. ನಾಯ್ಕರ ಏಕವ್ಯಕ್ತಿ ಸೈನ್ಯವು ಸಕ್ರಿಯವಾಗುವುದೇ ಅಪರಾಹ್ನ. ಸೀಮೆಎಣ್ಣೆ ಬುಡ್ಡಿಯಿಟ್ಟು ಸುರಂಗ ಕೊರೆದಿದ್ದಾರೆ. ದಿನಕ್ಕೆ ಆರೇಳು ಗಂಟೆಗಳ ಕಠಿಣ ದುಡಿತ. ಮೂರು ಸುರಂಗ ಕೊರೆದರೂ ವಿಫಲ. ಒಂದೆರಡು ಬಾರಿ